**O.S. 115-15 DW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ K H H, ವಕೀಲರಿಂದಃ**

2. ವಾದಿ ನಂಃ 1 ರವರು ಮರಣ ಹೊಂದಿದ್ದಾಳೆ. ವಾದಿ ನಂಃ 2 ರವರು ನನ್ನ ತಂಗಿ. ವಾದಿ ನಂಃ 2 ರಿಂದ 7 ರವರು ನನ್ನ ತಮ್ಮನ ಹೆಂಡತಿ ಹಾಗೂ ಮಕ್ಕಳು. ವಾದಿ ನಂಃ 8 ನನ್ನ ಹೆಂಡತಿ. ವಾದಿ ನಂಃ 9 ರಿಂದ 13 ರವರು ನನ್ನ ಮಕ್ಕಳು.

3. ಹನಮಂತಗೌಡ ಬಸನಗೌಡ ಹಳ್ಳದ, ರುದ್ರವ್ವ ಶಿವಾನಂದ ಹೂಗಾರ, ಮಂಜುನಾಥ ಬಸನಗೌಡ ಹಳ್ಳದ ರವರು ನಮಗೆ ಸಂಬಂಧ ಇಲ್ಲ.

4. ಖುರ್ಷಿದ ಕಲಘಟಗಿ ಜೊತೆಗೆ ಹೊಲಕ್ಕೆ ಸಂಬಂಧಪಟ್ಟಂತೆ ನಮ್ಮದು ಯಾವುದೇ ವ್ಯವಹಾರವಾಗಿಲ್ಲ. ಗಜಾನನ ಅಣವೇಕರ ರವರು ಪರಿಚಯವಿದ್ದಾನೆ. ನಾನು ಖುರ್ಷಿದ ಕಲಘಟಗಿ ಬಳಿ 20 ಸಾವಿರ ರೂ., 10 ರೂ. ಬಡ್ಡಿ ಹಾಗೆ ತೆಗೆದುಕೊಂಡಿದ್ದೆನು. ಆಗ ಖುರ್ಷಿದ ಕಲಘಟಗಿ ಕೇಸ ಹಾಕಿದ್ದನು. ಸದರಿ ಕೇಸನ್ನು ಗಜಾನನ ಅಣವೇಕರ ಮುಗಿಸಿಕೊಡುತ್ತೇನೆ ಅಂತಾ ಹೇಳಿದ್ದನು.

5. 2010 ರಲ್ಲಿ ವಿರಭದ್ರಗೌಡನಿಗೆ ಸಣ್ಣವನಿದ್ದನು. ರುದ್ರಗೌಡ, ವಿರಭದ್ರಗೌಡ, ಗಿರೀಶಗೌಡ ಹಾಗೂ ಈರಮ್ಮ ರವರು ಸಣ್ಣವರಿದ್ದರು. ನನಗೆ ಪ್ರತಿವಾದಿ 4 ರಿಂದ 6 ರವರು ಪರಿಚಯವಿಲ್ಲ. ನಾನು ಪ್ರತಿವಾದಿ 4 ರಿಂದ 6 ರವರಿಗೆ ಖರೀದಿ ಪತ್ರ ಬರೆದುಕೊಟ್ಟಿಲ್ಲ. ಮಾರುತಿ ನಿಂಗಪ್ಪ ರಾಯ್ಕರ ರವರ ಪರಿಚಯವಿಲ್ಲ. ಮಲ್ಲನಗೌಡ ಸಿದ್ದನಗೌಡ ಪಾಟೀಲ, ರುದ್ರಗೌಡ ಮಲ್ಲನಗೌಡ ಪಾಟೀಲ, ಶಿಬಾಯಿ ಮಲ್ಲನಗೌಡ ಪಾಟೀಲ ಹಾಗೂ ಬಸವ್ವ ಕೋಂ. ಈರನಗೌಡ ಕುರುಬಗಟ್ಟಿ ರವರು ಒಟ್ಟು ಮೋಕ್ತೆಯಾರ ಪತ್ರವನ್ನು ಮಾರುತಿ ನಿಂಗಪ್ಪ ರಾಯ್ಕರ ರವರಿಗೆ ಬರೆದುಕೊಟ್ಟಿಲ್ಲ. ಗಜಾನನ ಅಣವೇಕರ ರವರು ಹೇಳಿದ್ದಕ್ಕೆ ಬರೆದುಕೊಟ್ಟಿದ್ದಾರೆ. ವಾದಿಗಳು ಹಾಗೂ ನಾನು ಮತ್ತು ನನ್ನ ತಮ್ಮ ಚಟದ ಸಲುವಾಗಿ ಹಾಗೂ ಕುಟುಂಬದ ಹಿತಾಸಕ್ತಿಯ ವ್ಯತಿರಿಕ್ತವಾಗಿ ಪ್ರತಿವಾದಿ 4 ರಿಂದ 6 ರವರಿಗೆ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಅಂತಾ ಹೇಳುವುದು ಸರಿಯಲ್ಲ.

**O.S. 115-15** **DW-2**

6. ಸ ನಂಃ 95/6 ನಮ್ಮ ಕಬ್ಜೆಯಲ್ಲಿದೆ. ನಾನೇ ಆ ಜಮೀನಿನದಲ್ಲಿ ಮನೆ ಕಟ್ಟಿಸಿದ್ದೇನೆ. ಕುಟುಂಬದ ವ್ಯತಿರಿಕ್ತದ ಸಲುವಾಗಿ ಈ ವ್ಯವಹಾರ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.